



ಅರುಣ ಪಿ. ಭಟ್ಟ

## ವಾರ ಭವಿಷ್ಯ 22.09.2022ರಿಂದ 28.09.2022ರವರೆಗೆ




ಈ ವಾರದ ಆರಂಭದಲ್ಲೇ ಸಂಬಂಧಿಕರ ಭೇಟಿಗೆ ನಿಶ್ಚಯ ಮಾಡುವ ಸಾಧ್ಯತೆ ಇದೆ. ಬಹಳ ಕಾಲದ ನಂತರ ಸೋದರ ಸಂಬಂಧಿಗಳನ್ನು ಭೇಟಿ ಆಗಲಿದ್ದೀರಿ. ಇನ್ನು ಉದ್ಯೋಗಸ್ಥರಿಗೆ ತಾತ್ಕಾಲಿಕ ವರ್ಗಾವಣೆ ಸಾಧ್ಯತೆ ಇದೆ. ವಾರದ ಮಧ್ಯ ಭಾಗದಲ್ಲಿ ಕೌಟುಂಬಿಕ ಜೀವನ ಸಂತೋಷವಾಗಿರುತ್ತದೆ. ಸಂಗಾತಿ ಮಕ್ಕಳ ಜತೆಗಿನ ಬಾಂಧವ್ಯ ಉತ್ತಮವಾಗಿರುತ್ತದೆ. ಶುಭದಿನ 22. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.




ಈ ವಾರದ ಶುರುವಿನಲ್ಲೇ ಆದಾಯ ಹೆಚ್ಚಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತೀರಿ. ಜತೆಗೆ ಖರ್ಚನ್ನು ಕೂಡ ಕಡಿಮೆ ಮಾಡಿಕೊಳ್ಳುವಲ್ಲಿ ಯಶಸ್ವಿ ಆಗುತ್ತೀರಿ. ಪ್ರೀತಿಪಾತ್ರರಿಗೆ ಉಡುಗೊರೆಗಳನ್ನು ನೀಡುವ ಸಾಧ್ಯತೆ ಇದೆ. ವೈಯಕ್ತಿಕ ಜೀವನದಲ್ಲಿ ಸಣ್ಣ ಪುಟ್ಟ ವಿಷಯಗಳಿಗೂ ಭಿನ್ನಾಭಿಪ್ರಾಯ ತಲೆದೋರಲಿದೆ. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರಗತಿಗೆ ಹಲವು ಅಡ್ಡಿ ಆತಂಕ ಎದುರಾಗಲಿದೆ. ಶುಭದಿನ 28. ಹನುಮಾನ್ ಚಾಲಿಸ್ ಪಠಿಸಿರಿ.




ಉದ್ಯಮಿಗಳಿಗೆ ಅತ್ಯುತ್ತಮವಾದ ಸಮಯ. ಆರೋಗ್ಯ ಕೂಡ ಈ ಅವಧಿಯಲ್ಲಿ ಉತ್ತಮವಾಗಿರುತ್ತದೆ. ಇದರಿಂದ ನಿಮಗೆ ಸಮಾಧಾನ ಸಂತೋಷ ಉಂಟಾಗುತ್ತದೆ. ನಿಮ್ಮ ಕೆಲಸಗಳು ಪೂರ್ಣಗೊಳ್ಳುತ್ತವೆ. ಉದ್ಯೋಗಸ್ಥರಿಗೆ ಮಾಡುವ ಕೆಲಸದಲ್ಲಿ ಗುಣಮಟ್ಟದ ವೇಗ ಕಂಡುಕೊಳ್ಳಲು ಸಹಕಾರಿ ಆಗುತ್ತದೆ. ಸಾಮಾಜಿಕ ಸ್ಥಾನಮಾನವು ಹೆಚ್ಚಾಗಲಿದೆ. ಶುಭದಿನ 24. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಶೈಕ್ಷಣಿಕ ವಲಯದಲ್ಲಿ ಇರುವವರಿಗೆ ಅತ್ಯುತ್ತಮವಾದ ಅವಧಿ ಇದು. ತಂತ್ರಜ್ಞಾನ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಹಲವು ಅವಕಾಶಗಳು ಒಟ್ಟೊಟ್ಟಿಗೆ ಬರಲಿವೆ. ಆರೋಗ್ಯ ಬಗ್ಗೆ ನಿರ್ಲಕ್ಷ್ಯ ಮಾಡದೇ ಕಡ್ಡಾಯವಾಗಿ ವೈದ್ಯರಿಂದ ಚಿಕಿತ್ಸೆ ಪಡೆದುಕೊಳ್ಳಿ. ಮುಂಬರುವ ದಿನಗಳಲ್ಲಿ ಹಲವು ಸಕಾರಾತ್ಮಕ ಅವಕಾಶಗಳು ನಿಮ್ಮನ್ನು ಹುಡುಕಿಕೊಂಡು ಬರಲಿವೆ. ಶುಭದಿನ 23. ಶಿವಕವಚ ಪಠಣ ಮಾಡಿರಿ.




ವಾರದ ಶುರುವಿನಿಂದಲೇ ಕೆಲಸಗಳನ್ನು ಪೂರೈಸಲು ಶ್ರಮ ಹಾಕುತ್ತೀರಿ. ಹಣ ಹೂಡಿಕೆ ವ್ಯವಹಾರದಲ್ಲಿ ನಿಮ್ಮ ಸ್ಥಾನಮಾನಕ್ಕೆ ಧಕ್ಕೆ ಆಗುವ ಸಾಧ್ಯತೆ ಇದೆ. ಯಾರನ್ನೂ ಸುಮ್ಮನೆ ನಂಬುವುದು ಒಳ್ಳೆಯದಲ್ಲ. ಉನ್ನತ ಶಿಕ್ಷಣಕ್ಕೆ ಯತ್ನಿಸುತ್ತಿರುವವರು ಪ್ರಗತಿ ಕಾಣುತ್ತೀರಿ. ಈ ವಾರದಲ್ಲಿ ಹಲವು ಅವಕಾಶಗಳು ನಿಮ್ಮನ್ನು ಹುಡುಕಿಕೊಂಡು ಬರಲಿವೆ. ಶುಭದಿನ 25. ಲಿಂಗಾಷ್ಟಕ ಪಠಿಸಿರಿ.




ವಾರದ ಆರಂಭದಿಂದಲೇ ವ್ಯಾಪಾರದಲ್ಲಿ ನಿಮಗೆ ಇರುವ ಕನಸನ್ನು ಈಡೇರಿಸಿಕೊಳ್ಳಲು ಶ್ರಮ ಹಾಕುತ್ತೀರಿ. ಇದರಿಂದ ಮುಂಬರುವ ದಿನಗಳಲ್ಲಿ ನಿಮಗೇ ಅನುಕೂಲ ಆಗಲಿದೆ. ಭೂಮಿ ಖರೀದಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಹಲವು ಅವಕಾಶಗಳು ನಿಮಗೆ ದೊರೆಯುತ್ತವೆ. ನಿಮ್ಮ ವರ್ಚಸ್ಸು ಹಾಳು ಮಾಡಲು ವಿರೋಧಿ ಪಾಳಯದವರು ಬಹಳ ಪ್ರಯತ್ನ ಪಡುತ್ತಾರೆ. ಶುಭದಿನ 22. ಚಂಡಿ ಪಾರಾಯಣ ಮಾಡಿರಿ.




ಕೌಟುಂಬಿಕ ವಿಚಾರದಲ್ಲಿ ವಾರದ ಶುರುವಿನಲ್ಲಿ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಹಣಕಾಸಿಗೆ ಏನೂ ಕೊರತೆ ಇರುವುದಿಲ್ಲ. ಉದ್ಯೋಗ ಹಾಗೂ ಆರೋಗ್ಯದಲ್ಲಿ ಆಲಸ್ಯ ನಿಮ್ಮನ್ನು ಕಾಡಬಹುದು. ನಿಮ್ಮ ದೈನಂದಿನ ವ್ಯವಹಾರಗಳಲ್ಲಿ ಏರಿಳಿತಗಳಾಗುತ್ತವೆ. ವಾರದ ಮಧ್ಯದಲ್ಲಿ ಮನೆಗೆ ಸಂಬಂಧಿಸಿದ ವಿಷಯಗಳು ಪ್ರಾಮುಖ್ಯ ಪಡೆಯುತ್ತವೆ. ಶುಭದಿನ 24. ಸೌಂದರ್ಯ ಲಹರಿ ಪಠಿಸಿರಿ.




ಶೈಕ್ಷಣಿಕ ರಂಗದಲ್ಲಿ ಕಾರ್ಯ ನಿರ್ವಹಿಸುವವರಿಗೆ ವಾರದ ಆರಂಭದಲ್ಲಿ ಅದ್ಭುತವಾದ ಯಶಸ್ಸು ದೊರೆಯುವ ಅವಕಾಶಗಳಿವೆ. ಕ್ರೀಡೆ, ಸಿನಿಮಾ ಸಂಗೀತ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಗೌರವಯುತವಾದ ಸ್ಥಾನಮಾನ ದೊರೆಯಲಿದೆ. ಆದಾಯ ಮೂಲಗಳು ನೀವು ಅಂದುಕೊಂಡಿದ್ದಕ್ಕಿಂತ ಹೆಚ್ಚಿನ ಲಾಭವನ್ನು ತಂದುಕೊಡುವ ಸಾಧ್ಯತೆ ಇದೆ. ಶುಭದಿನ 26. ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ಉದ್ಯೋಗಸ್ಥರಿಗೆ ತಮ್ಮ ಗೌರವ, ಸ್ಥಾನ ಉಳಿಸಿಕೊಳ್ಳುವುದು ಮುಖ್ಯ. ಸಂತಾನ ನಿರೀಕ್ಷೆಯ ದಂಪತಿಗೆ ಶುಭ ಸುದ್ದಿ ಕೇಳುವ ಯೋಗ ಇದೆ. ಪೋಷಕರ ಅಗತ್ಯಗಳನ್ನು ಅರಿತು ಅವುಗಳನ್ನು ಪೂರೈಸಲು ಹೆಚ್ಚು ಪ್ರಯತ್ನ ಪಡುತ್ತೀರಿ. ವಾರದ ಮಧ್ಯ ಭಾಗದಲ್ಲಿ ನಿಮಗೆ ಅನುಕೂಲಕರವಾದ ಕೆಲ ಬೆಳವಣಿಗೆಗಳು ಆಗಲಿವೆ. ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವ ಸಾಧ್ಯತೆಗಳಿವೆ. ಶುಭದಿನ 22. ಕಾಲಭೈರವನ ಸೇವೆ ಮಾಡಿರಿ.




ನಿಮ್ಮ ಜ್ಞಾನ ಹೆಚ್ಚಿಸಿಕೊಳ್ಳಲು ವಾರದ ಆರಂಭದಲ್ಲಿ ಉತ್ತಮವಾದ ಅವಕಾಶ ದೊರೆಯಲಿದೆ. ಕುಟುಂಬದಲ್ಲಿ ಸಕಾರಾತ್ಮಕವಾದ ವಾತಾವರಣ ಸೃಷ್ಟಿಸುವಲ್ಲಿ ಯಶಸ್ವಿಯಾಗುತ್ತೀರಿ. ನಿಮ್ಮ ಶ್ರಮದ ಮೂಲಕವೇ ಆದಾಯ ಹೆಚ್ಚಳಕ್ಕೆ ಅವಕಾಶ ದೊರೆಯುತ್ತದೆ. ಉದ್ಯೋಗಸ್ಥರಿಗೆ ವಾರದ ಮಧ್ಯ ಭಾಗದಲ್ಲಿ ಬಡ್ತಿ ದೊರೆಯುವ ಅವಕಾಶಗಳಿವೆ. ಶುಭದಿನ 28. ವಿಷ್ಣು ಸಹಸ್ರನಾಮ ಮಾಡಿ.




ವಾರದ ಶುರುವಿನಲ್ಲಿ ಕೌಟುಂಬಿಕ ವಿಚಾರಗಳಿಗಾಗಿ ದೂರ ಪ್ರಯಾಣ ಮಾಡಬೇಕಾಗುತ್ತದೆ. ಕೆಲಸ ಮಾಡುವ ನಿಮ್ಮ ಸಾಮರ್ಥ್ಯ ಹೆಚ್ಚಾಗುತ್ತದೆ. ಈ ಅವಧಿಯಲ್ಲಿ ನಿಮ್ಮ ಆರೋಗ್ಯ ಅಷ್ಟೇನೂ ಉತ್ತಮವಾಗಿ ಇರುವುದಿಲ್ಲ. ಇದು ನಿಮ್ಮ ಚಿಂತೆಗೆ ಕಾರಣವಾಗಲಿದೆ. ವಾರದ ಮಧ್ಯ ಭಾಗದಲ್ಲಿ ಧಾರ್ಮಿಕ ಕೆಲಸ ಕಾರ್ಯಗಳನ್ನು ಮಾಡಲಿದ್ದೀರಿ. ಶುಭದಿನ 27. ಗಣೇಶಪಂಚರತ್ನ ಸ್ತೋತ್ರ ಪಠಿಸಿರಿ.




ವಾರದ ಆರಂಭದಲ್ಲಿ ವ್ಯವಹಾರ ಉದ್ಯಮದ ವಿಸ್ತರಣೆ ಬಗ್ಗೆ ಆಲೋಚನೆ ಮಾಡುತ್ತೀರಿ. ವೈವಾಹಿಕ ಜೀವನ ಸಂತುಷ್ಟವಾಗಿರುತ್ತದೆ. ಆರೋಗ್ಯ ಕೂಡ ಉತ್ತಮವಾಗಿ ಇರುತ್ತದೆ. ವಾರದ ಮಧ್ಯ ಭಾಗದಲ್ಲಿ ಕೌಟುಂಬಿಕ ವಿಚಾರವಾಗಿಯೇ ಪ್ರಯಾಣ ಮಾಡಬೇಕಾಗುತ್ತದೆ. ಹೀಗೆ ಸುತ್ತಾಟ ಮಾಡಿ ಬಂದ ನಂತರ ಆರೋಗ್ಯದಲ್ಲಿ ಏರುಪೇರು ಕಾಣಿಸಿಕೊಳ್ಳುತ್ತದೆ. ಶುಭದಿನ 27. ಲಕ್ಷ್ಮೀ ನರಸಿಂಹ ಸ್ತೋತ್ರ ಪಠಿಸಿರಿ.